Date : 9-9-2015

# ಕೇರಳದ ಗೋಡಂಬಿ ಉತ್ಪಾದನಾ ಕೇಂದ್ರ ಯಾಂತ್ರೀಕರಣದ ಕನಸು

ನವೀನ ಕಾಲದಲ್ಲಿ ಜಗತ್ತಿನೆಲ್ಲೆಡೆಯಿಂದ ಕಠಿನ ಸ್ಪರ್ಧೆಯ ಕಾಲಘಟ್ಟದಲ್ಲಿ ಅಸ್ಥಿತ್ವದ ಸವಾಲನ್ನೆದುರಿಸತ್ತಿರುವ ಕೇರಳ ಗೋಡಂಬಿ ಕಾರ್ಖಾನೆಗಳಿಗೆ ಯಾಂತ್ರಿಕರಣ ಆಮ್ಲಜನಕವಾಗಬಹುದೆನ್ನಲಾಗಿದೆ. ಆದರೆ ರಾಜಕಾರಣಿಗಳು ಓಟ್‌ಬ್ಯಾಂಕ್ ರಾಜಕೀಯ ಮಾಡುತ್ತಿದ್ದು ಯಾಂತ್ರೀಕರಣಗೊಂಡರೆ ಲಕ್ಷಾಂತರ ಮಹಿಳಾ ಉದ್ಯೋಗಿಗಳಿಗೆ ಉದ್ಯೋಗ ಕಳೆದುಕೊಳ್ಳ ಬಹುದೆನ್ನುತ್ತಿದ್ದಾರೆ. ಹಾಗೂ ಉದ್ಯೋಗ ನಷ್ಟವಾಗದ ಯಾಂತ್ರೀಕರಣವನ್ನು ಸ್ವಾಗತಿಸುತ್ತೇವೆನ್ನುತ್ತಿದ್ದಾರೆ. ಆದರೆ ಉತ್ಪಾದಕ ಸಂಸ್ಕರಣೆಗಾರ ಕಾರ್ಖಾನೆಗಳ ಪ್ರಕಾರ ಯಾಂತ್ರೀಕರಣಗೊಂಡರೆ ಉದ್ಯೋಗ ನಷ್ಟವಾಗುವ ಬದಲು ಹೆಚ್ಚಿನ ಉದ್ಯೋಗಾವಕಾಶಗಳುಂಟಾಗಬಹುದೆನ್ನುತ್ತಿದ್ದಾರೆ. ಗೋಡಂಬಿ ಸಂಸ್ಕರಣೆ ರೋಸ್ಟಿಂಗ್, ಶೆಲ್ಲಿಂಗ್, ಪೀಲಿಂಗ್ ಮತ್ತು ಗ್ರೇಡಿಂಗ್ ಎಂಬ ನಾಲ್ಕು ಹಂತಗಳನ್ನು ದಾಟಿ ರಫ್ತು ಗುಣಮಟ್ಟದ ಗೋಡಂಬಿ ತಿರುಳು ಮಾರಾಟಕ್ಕೆ ಸಿದ್ಧವಾಗುತ್ತದೆ. ಶೆಲ್ಲಿಂಗ್ ಹೆಚ್ಚಿನ ಕೂಲಿಕೆಲಸವನ್ನು ಅವಲಂಬಿಸಿದ್ದು, ಇತರೆಡೆಗಳ ಕೂಲಿಗಾರರು ಈಗ ಕೆಲಸ ನಿರ್ವಹಿಸುತ್ತಿದ್ದು ಕೆಲಸಗಾರರ ಅಭಾವವಿದೆ. ಆದರೆ ಯಾಂತ್ರೀಕರಣಗೊಂಡರೆ ಪ್ರತಿ ಕಾರ್ಖಾನೆ ಈಗಿನ 3 ಪಟ್ಟು ಶೆಲ್ಲಿಂಗ್ ಕೆಲಸ ಮುಗಿಸಿ ಮುಂದಿನ ಹಂತದ ಸಂಸ್ಕರಣೆಗೆ ಕೆಲಸಗಾರರ ಅವಶ್ಯಕತೆ ಹೆಚ್ಚಾಗಬಹುದು. ಆಗ ಹೆಚ್ಚಿನ ಉದ್ಯೋಗಾವಕಾಶವುಂಟಾಗಲಿದೆಯೆಂದು ಕಾರ್ಖಾನೆಯವರ ವಾದ. ಅಲ್ಲದೆ ಕೆಲಸ ಕಳೆದುಕೊಳ್ಳ ಬೇಕಾಗಿಲ್ಲವೆಂದು ಅವರು ಹೇಳುತ್ತಾರೆ. ಯಾಂತ್ರೀಕರಣಗೊಳ್ಳದೆ ಸ್ಪರ್ಧಾತ್ಮಕ ಜಗತ್ತಿನಲ್ಲಿ ಅಸ್ಥಿತ್ವ ಉಳಿಸಿಕೊಳ್ಳಲಾಗದಿದ್ದರೂ ಉದ್ಯೋಗಾವಕಾಶಕ್ಕೆ ಮತ್ತು ಈಗಿನ ಉದ್ಯೋಗಿಗಳಿಗೆ ಕೆಲಸವಿಲ್ಲದೆ ಉದ್ಯೋಗ ಕಳೆದುಕೊಳ್ಳಬೇಕಾಗಬಹುದು.